ಮಾಡಿ, ಲೋಕ ಸೇವಾ ಆಯೋಗದಲ್ಲಿ ಕನ್ನಡ ವಿರೋಧಿ ಚಟುವಟಿಕೆಗಳನ್ನು ಬೆಳೆಯುಗೊಡದೆ ಹಾಗೆ ಮೊಟಕು ಮಾಡಬೇಕು, ಮತ್ತು ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಲೋಕ ಸೇವಾ ಆಯೋಗದಿಂದ ಆಯ್ಕೆಯಾದ ಅಭ್ಯರ್ಥಿಗಳು ಜನಗಳ ಮಧ್ಯೆ ಕೆಲಸ ಮಾಡಬೇಕಾಗಿರುವುದರಿಂದ ಜನಗಳ ಭಾಷೆಯ ಅರಿವು ಅವರಿಗಿರಬೇಕೆಂದು ಉತ್ತರ ಪ್ರದೇಶ ಸರ್ಕಾರವು ಭಾವಿಸಿ, ಅಲ್ಲಿನ ಪ್ರಾದೇಶಿಕ ಭಾಷೆಯನ್ನು ಆಯೋಗದ ಪರೀಕ್ಷೆಯಲ್ಲಿ ಕಡ್ಡಾಯವನ್ನಾಗಿ ಮಾಡಲಾಗಿದೆ. ಅದೇ ರೀತಿ ಕರ್ನಾಟಕ ದಲ್ಲೂ ಸಹ ಆಯೋಗದ ಪರೀಕ್ಷೆಗಳಲ್ಲಿ ನಾನ್ ಗೆಜೆಟೆಡ್ ಹುದ್ದೆಗಳಿಗೆ ಬರುವ ಅಭ್ಯರ್ಥಿಗಳಿಗೆ ಎಸ್.ಎಸ್.ಎಲ್ ಸಿ. ಮಟ್ಟದ ಕನ್ನಡ ಭಾಷೆಯನ್ನೂ ಮತ್ತು ಅದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಬರುವ ಅಭ್ಯರ್ಥಿಗಳಿಗೆ ಪದವಿ ಮಟ್ಟದ ಕನ್ನಡ ಭಾಷೆಯನ್ನೂ ತೆಗದುಕೊಂಡು, ಅದರಲ್ಲಿ ಉತ್ತೀರ್ಣರಾದ ವರಿಗೆ ಮಾತ್ರ ಕೆಲಸ ಕೊಡಲಾಗುವುದೆಂದು ಹೇಳಬೇಕು.

ಉತ್ತರ ಭಾರತದಲ್ಲಿ ಬಿಹಾರ, ರಾಜಸ್ಥಾನ ಮತ್ತು ಹರಿಯಾಣ ಈ ಪ್ರದೇಶಗಳಲ್ಲಿ ಹಿಂದಿ ಪರೀಕ್ಷೆ ಯನ್ನು ತೆಗೆದುಕೊಂಡರೆ ಮಾತ್ರ ಅವರು ಪಬ್ಲಿಕ್ ಸರ್ವೀಸ್ ಕಮಿಷನ್ ಪರೀಕ್ಷೆಯನ್ನು ತೆಗೆದುಕೊಳ್ಳು ವುದಕ್ಕೆ, ಅಭ್ಯರ್ಥಿಗಳಿಗೆ ಕೆಲಸಕ್ಕೆ ಇಂಟರ್‌ವ್ಯೂ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಕರ್ನಾಟಕ ದಲ್ಲಿ ೧೯೫೬ನೇ ಇಸವಿಯಲ್ಲಿ ಕರ್ನಾಟಕ ಏಕೀಕರಣವಾದರೂ ಇನ್ನು ಇಲ್ಲಿ ಆ ಬಗ್ಗೆ ಕ್ರಮತೆಗೆದುಕೊಂಡಿಲ್ಲ; ಅದನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ii) re: Statement by the Sahitya Parishad President about non Celebreting the Rajyotsava unless Kannada is made official language of the State.

† ಶ್ರೀಮತಿ ಎಸ್. ಪ್ರಮೀಳಾ.—ಸ್ವಾಮಿ ಕರ್ನಾಟಕ ದೇಶದಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ಅಖಂಡ ಕರ್ನಾಟಕದಲ್ಲಿ ಅತ್ಯಂತ ವಿಜೃಂಬಣೆಯಿಂದ ಒಂದು ಹಬ್ಬವನ್ನು ಆಚರಿಸುತ್ತಿದ್ದಾರೆ, ಕನ್ನಡ ಮಕ್ಕಳು ಹರಿದು ಹಂಚಿಹೋಗಿದ್ದ ಸಂದರ್ಭದಲ್ಲಿ ಹಲವಾರು ವರ್ಷಗಳಿಂದ ಎಲ್ಲರೂ ಕೂಡಿ ಮುಂಬೈ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮದ್ರಾಸ್ ಕರ್ನಾಟಕ, ಬಳ್ಳಾರಿ, ಆಂಧ್ರ ಪ್ರದೇಶ ಹೀಗೆ ಐದು ಪ್ರಾಂತಗಳಲ್ಲಿ ಇದ್ದ ಕನ್ನಡಿಗರೆಲ್ಲರೂ ಒಟ್ಟುಗೂಡಿ ಒಂದು ಕಡೆ ಸೇರಬೇಕು ಎಂದು ಹೇಳುತ್ತಿದ್ದ ಶ್ರೀಮಾನ್ ಆಲೂರು ವೆಂಕಟರಾಯರ ಕನಸು ನನಸಾಯಿತು. ಕರ್ನಾಟಕ ಏಕೀ ಕರಣದ ಬಗ್ಗೆ ಕನ್ನಡಸಾಹಿತ್ಯ ಪರಿಷತ್ತು, ಸರ್ಕಾರದವರು ಮತ್ತು ಸಾರ್ವಜನಿಕರು ಎಲ್ಲರೂ ಕೂಡ ಗಡಿನಾಡಿನಲ್ಲಿ ಹೋರಾಟ ಮಾಡಿದ ಮೇಲೆ ಅದೃಷ್ಟವಶಾತ್ ಕರ್ನಾಟಕ ರಾಜ್ಯ ೧೯೫೬ನೇ ನವಂಬರ್ ಒಂದರಂದು ಉದಯವಾಯಿತು. ಕನ್ನಡಸಾಹಿತ್ಯ ಪರಿಷತ್ತು ಕರ್ನಾಟಕದಲ್ಲಿ ಕನ್ನಡಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ನಡೆಸುವ ಬಗ್ಗೆ ಕನ್ನಡ ಜನತೆಯು ಕೊಡುವ ಕರದಿಂದ ಸರ್ಕಾರದವರು ಗ್ರಾಂಟನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ಕೊಟ್ಟುಕೊಂಡು ಬಂದಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನವರೂ ಕೂಡ ಕೆಲವು ಕಾರ್ಯಕ್ರಮಗಳನ್ನೂ ಮತ್ತು ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತಾ ಬಂದಿದ್ದಾರೆ. ಆದರೆ ಮೊನ್ನೆತಾನೆ ಹೊಸದಾಗಿ ಕನ್ನಡ ಸಾಹಿತ್ಯಪರಿಷತ್ತಿನ ಅಧ್ಯಕ್ಷಸ್ಥಾನಕ್ಕೆ ಆರಿಸಿಬಂದಿರತಕ್ಕ ಅಧ್ಯಕ್ಷರು ಇಡೀ ಕರ್ನಾಟಕದಲ್ಲಿ ಕನ್ನಡವನ್ನು ರಾಜ್ಯಭಾಷೆಯಾಗಿ ಸರ್ಕಾರದವರು ಎಲ್ಲಿಯುವರೆಗೆ ತರುವುದಿಲ್ಲವೋ ಅಲ್ಲಿಯುವರೆಗೆ ನಾವು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕನ್ನಡರಾಜ್ಯೋತ್ಸವವನ್ನು ಆಚರಿಸುವುದಿಲ್ಲ ; ಭಾಗವಹಿಸುವುದಿಲ್ಲ, ಎಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಎಲ್ಲಾ ಪತ್ರಿಕೆಗಳಲ್ಲಿಯೂ ಜಾಹಿರಾತು ಬಂದಿದೆ. ಈ ಸಂದರ್ಭದಲ್ಲಿ ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡರಾಜ್ಯೋತ್ಸವವನ್ನು ಆಚರಿಸುವುದಿಲ್ಲ ಎಂದು ಹೇಳುವುದು ಒಬ್ಬ ವ್ಯಕ್ತಿಯ ಸ್ವತ್ತಲ್ಲ. ಇದು ಇಡೀ ಕರ್ನಾಟಕದ ಮೂರು ಕೋಟಿ ಜನಗಳಿಗೆ ಸಂಬಂಧಪಟ್ಟದ್ದು. ಕನ್ನಡವನ್ನು ರಾಜ್ಯಭಾಷೆ ಯಾಗಿ ಯಾವಾಗ ಜಾರಿಗೆ ತರಬೇಕು, ಹೇಗೆ ತರಬೇಕು ಯಾವ ಸಂದರ್ಭದಲ್ಲಿ ತರಬೇಕು ಎಂಬುದನ್ನು ಸರ್ಕಾರದವರು ಸ್ಪಷ್ಟಪಡಿಸಿದ್ದಾರೆ. ಕನ್ನಡವನ್ನು ರಾಜ್ಯಭಾಷೆಯಾಗಿ ಹಂತಹಂತವಾಗಿ ಜಾರಿಗೆ ತರ ಬೇಕು ಎಂದು ಸರ್ಕಾರದವರು ಹೇಳಿದ್ದಾರೆ. ಅದೇರೀತಿ ಈಗ ಸರ್ಕಾರದವರು ಕನ್ನಡವನ್ನು ರಾಜ್ಯ ಭಾಷೆಯಾಗಿ ತಾಲ್ಲೂಕು ಮಟ್ಟದಲ್ಲಿ ತಂದಿದ್ದಾರೆ. ಸಾಹಿತ್ಯಪರಿಷತ್ತಿನ ಅಧ್ಯಕ್ಷರು ಒಬ್ಬ ವ್ಯಕ್ತಿ ಈ ರೀತಿ ಸರ್ಕಾರಕ್ಕೆ ಹೆದರಿಕೆಯನ್ನು ಹಾಕಬಹುದೇ ? ಇಡೀ ರಾಜ್ಯದಲ್ಲಿ ಕನ್ನಡವನ್ನು ರಾಜ್ಯಭಾಷೆಯಾಗಿ ಜಾರಿಗೆ ತರದಿದ್ದರೆ ನಾವು ಕನ್ನಡ ಸಾಹಿತ್ಯಪರಿಷತ್ತಿನಲ್ಲಿ ಕನ್ನಡರಾಜ್ಯೋತ್ಸವವನ್ನು ಆಚರಿಸುವುದಿಲ್ಲ ಎಂದು ಹೇಳತಕ್ಕ ಅಧಿಕಾರ ಅವರಿಗೆ ಇದೆಯೋ ? ಈ ತರಹ ಒಬ್ಬ ವ್ಯಕ್ತಿ ಅಧ್ಯಕ್ಷರು ಹೇಳುವ ಸಂದರ್ಭದಲ್ಲಿ

ಅದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳಬೇಕು, ಸರ್ಕಾರದಿಂದ ಅವರಿಗೆ ಕೊಡತಕ್ಕ ಗ್ರಾಂಟನ್ನು ಕೊಟ್ಟು ಅವರ ಹತ್ತಿರ ಬೈಯಿಸಿಕೊಳ್ಳಬೇಕು ಎಂಬುದನ್ನು ಯಾರೂ ಬಯಸುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ರೇಟ್ ಪೇಯರ್ಸ್ ಕರಕೊಟ್ಟ ಹಣದಲ್ಲಿ ಪರಿಷತ್ತಿಗೆ ಗ್ರಾಂಟನ್ನು ಕೊಟ್ಟಿರುವಾಗ ಅವರು ರಾಜ್ಯೋತ್ಸವವನ್ನು ಮಾಡುವುದಿಲ್ಲ ಎಂದು ಹೇಳುವುದು ನಮ್ಮ ಕರ್ನಾಟಕಕ್ಕೆ ಬಂದಂತ ಒಂದು ದುರಾದೃಷ್ಟ ಎಂದು ನಾವು ಹೇಳಬೇಕಾಗುತ್ತದೆ. ಅಧ್ಯಕ್ಷರು ಆ ಮಾತನ್ನು ಹೇಳಿರುವುದು ವಕ್ತಿಗತವಾಗಿ ಹೇಳಿದ್ದಾರೆಯೋ ಪರಿಷತ್ತಿನ ಮುಖಾಂತರ ಹೇಳಿದ್ದಾರೆಯೋ ಎನ್ನುವ ಪ್ರಶ್ನೆ ಮುಖ್ಯ ಪರಿಷತ್ತು ಇಡೀ ಕರ್ನಾಟಕದ ಸ್ವತ್ತು. ಇಡೀ ಕರ್ನಾಟಕದ ಕನ್ನಡ ಸಾಹಿತ್ಯದ ಏಳಿಗೆಗೆ ಸಂಸ್ಕೃತಿ ಮತ್ತು ಕಲೆಯ ಏಳಿಗೆಗೆ, ಕನ್ನಡ ಭವಿಷ್ಯಕ್ಕಾಗಿ ಇರತಕ್ಕ ಸಂಸ್ಥೆಗಳು. ಇಂಥಾ ಪವಿತ್ರವಾದ ಸಂಸ್ಥೆಯ ಅಧ್ಯಕ್ಷರು ಈ ರೀತಿ ಹೇಳುವಾಗ ಮಾನ್ಯ ಮಂತ್ರಿಗಳು ಕೈಕಟ್ಟಿಕುಳಿತುಕೊಂಡಿರುವುದು ಬಹಳ ಶೋಚನೀಯವಾದ ಪರಿಸ್ಥಿತಿ. ಈ ಅಧ್ಯಕ್ಷರು ಒಂದು ಹೇಳಿಕೆಯನ್ನು ಕೊಟ್ಟಿರುವಾಗ ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದರೆ ನಾನು ಈ ದಿವಸ ಈ ವಿಷಯವನ್ನು ಈ ಸಭೆಯ ಮುಂದೆ ತರತಕ್ಕ ಪರಿಸ್ಥಿತಿಯೇ ಇರಲಿಲ್ಲ. ಈ ರೀತಿ ಪರಿಷತ್ತಿನ ಅಧ್ಯಕ್ಷರು ಹೇಳಿದ ನಂತರವೂ ಮತ್ತೆ ಪರಿಷತ್ತಿಗೆ ಗ್ರಾಂಟು ಕೊಟ್ಟು ಅವರಿಂದ ಬೈಯಿಸಿಕೊಳ್ಳುವ ಪರಿಸ್ಥಿತಿಯನ್ನುಂಟು ಮಾಡುತ್ತಾರೆಯೋ ಅಥವಾ ಅವರ ಮೇಲೆ ಯಾವ ರೀತಿಯಾದರೂ ಕ್ರಮ ತೆಗೆದುಕೊಂಡು ಅವರಿಗೆ ಆದೇಶವನ್ನು ಕೊಟ್ಟು ಕನ್ನಡ ಸಾಹಿತ್ಯ ಪರಿಷತ್ತು ಇಡೀ ಕರ್ನಾಟಕದ ಜನತೆಯ ಸ್ವತ್ತು ಆದ್ದರಿಂದ ರಾಜ್ಯೋತ್ಸವವನ್ನು ಮಾಡತಕ್ಕದ್ದು ಎಲ್ಲರ ಹಕ್ಕು ಇದು ಎಲ್ಲರ ಅಜನ್ಮಸಿದ್ಧವಾದ ಹಕ್ಕು ಆದ್ದರಿಂದ ಅದರ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಗಮನವನ್ನು ಹರಿಸಬೇಕು ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

† ಶ್ರೀ ಸಿ. ಎಂ. ಇಬ್ರಾಹಿಂ (ಶಿವಾಜಿನಗರ).—ಮಾನ್ಯ ಮಂತ್ರಿಗಳು ಈ ಬಗ್ಗೆ ತಮ್ಮ ಒಂದು ಸ್ಟೇಟ್‌ಮೆಂಟ್ ಕೊಡುವುದಕ್ಕೆ ಮುಂಚೆ ನಾನು ಸಾಹಿತ್ಯ ಪರಿಷತ್ತಿನ ಬಗ್ಗೆ ಒಂದು ಅಭಿಪ್ರಾಯವನ್ನು ಹೇಳಬಯಸುತ್ತೇನೆ. ನಾನು ಈ ಮನೆಯ ಸದಸ್ಯನಾಗಿ, ಕರ್ನಾಟಕ ರಾಜ್ಯದ ಒಬ್ಬ ಪ್ರಜೆಯಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರುಕೊಟ್ಟಿರತಕ್ಕ ಹೇಳಿಕೆ ಸಮಂಜಸವಾದುದು ಎಂದು ನಾನು ಅದನ್ನು ಪೂರ್ಣವಾಗಿ ಸಮರ್ಥಿಸುತ್ತೇನೆ ಈಗ ಸುಮಾರು ೨೦-೨೫ ವರ್ಷಗಳ ಇತಿಹಾಸವನ್ನು ನೋಡಿದರೂ ಕೂಡ ಬರೀ ಚಳುವಳಿ ರೂಪದಲ್ಲಿ ಮಾಡುತ್ತಿದ್ದರು. ಅದನ್ನು ಹಿಂಸಾತ್ಮಕ ರೀತಿಯಲ್ಲಿ ನಡೆಸಿಲ್ಲ. ಇವೊತ್ತು ಪರಿಷತ್ತಿನ ಅಧ್ಯಕ್ಷರು ಸರ್ಕಾರಕ್ಕೆ ಒಂದು ಪ್ರತಿಭಟನೆ ಸೂಚಿಸುವುದಕ್ಕಾಗಿ ಮುಕ್ಕೋಟಿ ಕನ್ನಡಿಗರ ಭಾಷೆಯಾದ ಕನ್ನಡ ಭಾಷೆ ಏನಿದೆ ಅದು ಎಂದಿನವರೆಗೆ ರಾಜ್ಯಭಾಷೆಯಾಗುವುದಿಲ್ಲ, ಅಲ್ಲಿಯವರೆಗೆ ನಾವು ರಾಜ್ಯೋತ್ಸವವನ್ನು ಮಾಡುವುದಿಲ್ಲ ಎಂದು ಏನು ಹೇಳಿದ್ದಾರೆ ಅದು ಸಮರ್ಪಕವಾಗಿದೆ. ಏತಕ್ಕೆ ರಾಜ್ಯೋತ್ಸವ ಮಾಡಬೇಕು ? ಹರಿದು ಹಂಚಿಹೋಗಿದ್ದ ಜನರು ಒಂದುಗೂಡಿದ್ದಕ್ಕಾಗಿ ನಾವು ರಾಜ್ಯೋತ್ಸವವನ್ನು ಮಾಡಬೇಕೇ ? ಇವೊತ್ತು ಯಾವ ರಾಜ್ಯಕ್ಕೆ ಹೋಗಿ ನೋಡಿದರೂ ಕೂಡ ಅಲ್ಲಿ ಅಯಾಯ ರಾಜ್ಯಗಳ ಭಾಷೆಯನ್ನು ಆಡಳಿತಭಾಷೆಯನ್ನಾಗಿ ಮಾಡಿದರೆ. ಆದರೆ ನಮ್ಮಲ್ಲಿ ಆ ರೀತಿ ಮಾಡಿಲ್ಲ. ಈ ದೃಷ್ಟಿಯಿಂದ ಪರಿಷತ್ತಿನ ಅಧ್ಯಕ್ಷರು ಹೇಳಿರುವುದು ಸಮಂಜಸವಾಗಿದೆ. ಈಗ ಕುಮಾರಿ ಪ್ರಮಿಳಾ ಅವರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಅದು ನಮ್ಮ ಪಕ್ಷದ ಅಭಿಪ್ರಾಯವಲ್ಲ. ಅದು ಅವರ ವೈಯಕ್ತಿಕ ಅಭಿಪ್ರಾಯ. ಆದರೆ ಇವೊತ್ತು ಪರಿಷತ್ತಿಗೆ ಏನು ಗ್ರಾಂಟ್ ಕೊಡುತ್ತಿದ್ದಾರೆ ಅದನ್ನು ನಿಲ್ಲಿಸತಕ್ಕದ್ದು ಸರಿಯಲ್ಲ. ನಾನು ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಅವರು ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಈ ಬಗ್ಗೆ ಚರ್ಚೆ ಮಾಡಿ ಕಡ್ಡಾಯವಾಗಿ ಕನ್ನಡವನ್ನು ರಾಜ್ಯಭಾಷೆಯಾಗಿ ಮಾಡಬೇಕು ಇದರ ಬಗ್ಗೆ ಯಾವ ಅಡ್ಡಿ ಅತಂಕಗಳು ಬಂದರೂ ಕೂಡ ಅದನ್ನು ಎದುರಿಸುವಂತಹ ಧೈರ್ಯ ಮತ್ತು ಸ್ಥೈರ್ಯ ಇರಬೇಕು. ಮತ್ತು ಕನ್ನಡ ಭಾಷೆಯನ್ನು ಆಡಳಿತಭಾಷೆಯನ್ನಾಗಿ ಮಾಡಬೇಕು. ಕನ್ನಡವನ್ನು ರಾಷ್ಟ್ರಭಾಷೆಯನ್ನಾಗಿ ಮಾಡಬೇಕು.

ಅಧ್ಯಕ್ಷರು.—ಕನ್ನಡವನ್ನು ರಾಜ್ಯಭಾಷೆಯನ್ನಾಗಿ ಮಾಡಬೇಕೋ ರಾಷ್ಟ್ರಭಾಷೆಯನ್ನಾಗಿ ಮಾಡಬೇಕೋ ?

ಶ್ರೀ ಸಿ. ಎಂ. ಇಬ್ರಾಹಿಂ.—ಶ್ರೀಮಾನ್ ದೇವರಾಜ ಅರಸ್ ಅವರು ಪ್ರಧಾನ ಮಂತ್ರಿಗಳಾದರೆ ಕನ್ನಡವನ್ನು ರಾಷ್ಟ್ರಭಾಷೆಯನ್ನಾಗಿ ಮಾಡುತ್ತಾರೆ.

(ಕೆಲವು ಆಡಳಿತ ಪಕ್ಷದ ಮಾನ್ಯ ಸದಸ್ಯರು ಮೇಜನು ತಟ್ಟಿದರು)

ಶ್ರೀ ಸಿ. ಎಂ. ಇಬ್ರಾಹಿಂ.—ಕೈ ತಟ್ಟಿ ಇಂದಿರಾಗಾಂಧಿಯವರಿಗೆ ಕೈಕೊಟ್ಟೀರಾ ? ಸಾಹಿತ್ಯ ಪರಿಷತ್ತಿಗೆ ಕೊಡತಕ್ಕ ಗ್ರಾಂಟನ್ನು ನಿಲ್ಲಿಸಬಾರದು ಕನ್ನಡವನ್ನು ರಾಜ್ಯಭಾಷೆಯಾಗಿ ಜಾರಿಗೆ ತರಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಮಳ್ಳೂರ್ ಆನಂದರಾವ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೇ ಇಲ್ಲಿ ಇರತಕ್ಕ ವಿಷಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಕೆಲವು ದಿವಸಗಳ ಹಿಂದೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರು ಅವರ ಹೇಳಿಕೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ, ಮತ್ತು ಅವರ ಹೇಳಿಕೆಯ ಹಿಂದೆ ಇರತಕ್ಕ ಅಂತಃಕರಣವನ್ನು ಕಳಕಳಿಯಿಂದ ಅರ್ಥ ಮಾಡಿಕೊಳ್ಳಬೇಕು. ಕನ್ನಡ ನಾಡಿನಲ್ಲಿ ಕರ್ನಾಟಕದಲ್ಲಿ ಕನ್ನಡ ಭಾಷೆಯನ್ನು ರಾಜ್ಯಭಾಷೆಯಾಗಿ ಮಾಡಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ತು ಎಚ್ಚರಿಕೆಯನ್ನು ಕೊಡುವ ಮಟ್ಟಕ್ಕೆ ನಾವು ಅಲ್ಲಿಯ ತನಕ ಬಿಟ್ಟುಬಿಟ್ಟರೆ ನಮಗೆಲ್ಲರಿಗೂ ಒಂದು ನಾಚಿಕೆಗೇಡಿನ ಸಂಗತಿ. ಅವರ ಒಂದು ಹೇಳಿಕೆಯಲ್ಲಿ ಒಂದು ಥ್ರೆಟ್ ಕೂಡ ಇದೆ. ಶ್ರೀಮಾನ್ ಇಬ್ರಾಹಿಂ ಅವರು ಹೇಳಿದಂತೆ ಇದು ಸಮಂಜಸವಾಗಿದೆ. ಕನ್ನಡವನ್ನು ರಾಜ್ಯಭಾಷೆಯಾಗಿ ಮಾಡದಿದ್ದರೆ ಕನ್ನಡ ರಾಜ್ಯೋತ್ಸವವನ್ನು ನಿಲ್ಲಿಸಬೇಕಾಗುತ್ತದೆ ಎನ್ನುವ ಮಟ್ಟಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಎಚ್ಚರಿಕೆಯನ್ನು ಕೊಟ್ಟಿದೆ ಎಂದರೆ ಸರ್ಕಾರದ ನೀತಿ ಏನಿದೆ ಎನ್ನುವುದು ವ್ಯಕ್ತವಾಗುತ್ತದೆ. ಇದರ ಹಿಂದೆ ಇರತಕ್ಕ ಗಂಭೀರತೆಯನ್ನು ಕಳಕಳಿಯಿಂದ ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಎಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕರ್ನಾಟಕದಲ್ಲಿ ಕನ್ನಡವನ್ನು ರಾಜ್ಯಭಾಷೆಯಾಗಿ ಡಿಕ್ಲೇರ್ ಮಾಡಿದ್ದೇವೆ ಎಂದು ಮಂತ್ರಿಗಳು ಉತ್ತರವನ್ನು ಕೊಡುವುದು ನಮಗೆ ಗೊತ್ತಿದೆ. ಮಂತ್ರಿಗಳೂ ಹಿಂದೆ ಹೇಳಿದ್ದಾರೆ. ಸರ್ಕಾರಿ ಆಜ್ಞೆಯಲ್ಲಿ ಮತ್ತು ಪ್ರಕಟಣೆಯಲ್ಲಿ ಕನ್ನಡವನ್ನು ರಾಜ್ಯಭಾಷೆಯಾಗಿ ಘೋಷಣೆ ಮಾಡಿದ್ದೇವೆ ಎಂದು. ಆದರೆ ಅದು ಕಾರ್ಯತಃ ಆಚರಣೆಯಲ್ಲಿ ಇಲ್ಲ. ಇದರ ಬಗ್ಗೆ ಕನ್ನಡಾಭಿಮಾನಿಗಳಾದ ನಾವು ಪ್ರತಿಯೊಬ್ಬರೂ ಯೋಚನೆ ಮಾಡಬೇಕಾದ್ದು. ಕರ್ನಾಟಕ ರಾಜ್ಯದಲ್ಲಿ ಹಿಂದಿ ಭಾಷೆ ಹೇರಿಕೆ ಬಗ್ಗೆ ರಾಜಕೀಯ ದೃಷ್ಟಿಯಿಂದ, ಕೃತಕ ದ್ವೇಷವನ್ನು ಉಂಟುಮಾಡುತ್ತಿದ್ದೀರಿ. ಆದರೆ ಅದೇ ಇಂಗ್ಲಿಷ್ ಮೇಲೆ ಅತಿಯಾದ ಪ್ರೇಮವನ್ನು ತೋರಿಸುತ್ತಿದ್ದೀರಿ. ಉದಾಹರಣೆಗೆ ಹೇಳುವುದಾದರೆ ನಮ್ಮ ಕರ್ನಾಟಕ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿ ಪ್ರತಿದಿನ ನಡೆಯುತ್ತಿರುವ ನಡವಳಿಕೆಗಳೆಲ್ಲಾ ಇಂಗ್ಲಿಷ್ ಭಾಷೆಯಲ್ಲೇ ನಡೆಯುತ್ತಿದೆ. ಈ ಸದನದ ಮಾನ್ಯ ಸದಸ್ಯರುಗಳಾದ ಶ್ರೀಮತಿ ಪ್ರಮೀಳಾರವರು ಮತ್ತು ಶ್ರೀಮಾನ್ ಇಬ್ರಾಹಿಂರವರು ಹೇಳಿದಂತೆ ಇದು ನಮ್ಮ ಪಕ್ಷದ ಪ್ರಶ್ನೆಯಲ್ಲ, ಇದು ಇಡೀ ಕನ್ನಡ ನಾಡಿನ ಪ್ರಶ್ನೆ. ತಾಲ್ಲೂಕು ಆಫೀಸಿನ ಕೆಳಗಿನ ಹಂತದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ............

ಅಧ್ಯಕ್ಷರು.—ಈಗ ಸಭೆಯ ಮುಂದಿರುವ ವಿಷಯ ರೂಲ್ ೩೧೭ಕ್ಕೆ ಸಂಬಂಧಿಸಿದ್ದು. ತಾವು ಏನು ಹೇಳಬೇಕೋ ಅದನ್ನು ಸಂಕ್ಷಿಪ್ತವಾಗಿ ಹೇಳಿ ಮಂತ್ರಿಗಳಿಂದ ಉತ್ತರ ಪಡೆಯಿರಿ.

ಶ್ರೀ ಮಳ್ಳೂರು ಆನಂದರಾವ್.— ವಸ್ತುಸ್ಥಿತಿಯಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿಲ್ಲ. ಎಲ್ಲ ಹಂತಗಳೂ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿ ಎಂದು ತಾವು ಸರ್ಕಾರದಿಂದ ೨–೩ ಸುತ್ತೋಲೆಗಳನ್ನು ಕಳುಹಿಸಿದರಿಂದಲೇ ಕೆಲಸ ಪೂರ್ತಿಯಾಗಿ ಆಗುತ್ತದೆಂದು ತಾವು ತಿಳಿದುಕೊಳ್ಳಬೇಡಿ. ಕಾರ್ಯತಃ ಇದು ಆಗಬೇಕು. ಇವತ್ತು ಪಿ.ಎಸ್.ಸಿ. ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಉತ್ತರ ಬರೆಯುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಿ ಎಂದು ಇಪ್ಪತ್ತು ಸಾರಿ ಕೇಳಿದರೂ ಇನ್ನೂ ಅದಕ್ಕೆ ಅವಕಾಶವನ್ನು ಮಾಡಿಕೊಟ್ಟಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ ಅದನ್ನು ತಾವು ಲಘುವಾಗಿ ತೆಗೆದುಕೊಳ್ಳದೆ ಗಂಭೀರವಾಗಿ ತೆಗೆದುಕೊಂಡು ಸಾಧ್ಯವಾದರೆ ಆ ಪರಿಷತ್ತಿನ ಅಧ್ಯಕ್ಷರನ್ನೂ ಕರೆಸಿ ಬರುವ ನವೆಂಬರ್ ೧ನೇ ತಾರೀಖಿನೊಳಗಾಗಿ ಎಲ್ಲ ಹಂತಗಳಲ್ಲೂ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡುವುದಾಗಿ ಸರ್ಕಾರದವರು ಒಂದು ಘೋಷಣೆಯನ್ನು ಮಾಡಿ, ಮತ್ತು ಮಾನ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಏನೊಂದು ಎಚ್ಚರಿಕೆಯನ್ನು ಕೊಟ್ಟಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗ ಇದನ್ನು ಕಾರ್ಯರೂಪಕ್ಕೆ ತಂದು ಅವರೂ ಈ ರಾಜ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸುವಂತೆ ಮಾಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕಳಕಳಿಯಿಂದ ಮನವಿಮಾಡಿಕೊಳ್ಳುತ್ತೇನೆ.

† ಶ್ರೀ ಬಿ. ಸುಬ್ಬಯ್ಯ ಶೆಟ್ಟಿ (ವಿದ್ಯಾ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರುಗಳಾದ ಶ್ರೀಮತಿ ಪ್ರಮೀಳಾರವರೂ ಮತ್ತು ಶ್ರೀಮಾನ್ ಮಳ್ಳೂರು ಆನಂದರಾವ್ ರವರೂ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಶ್ರೀ ಮಾನ್ ಮಳ್ಳೂರು ಆನಂದರಾಯರು ಸರ್ಕಾರದ ನೀತಿ ಏನಿದೆ ಎಂಬುದನ್ನು ಹೇಳಿದ್ದಾರೆ. ನಾನಾದರೂ ಹೇಳುವುದಿಷ್ಟೆ. ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡಬೇಕೆಂಬುದೇ ಸರ್ಕಾರದ ನೀತಿಯಾಗಿದೆ. ಈ ನೀತಿಯನ್ನು ಈಗಾಗಲೇ ಘೋಷಣೆ ಮಾಡಲಾಗಿದೆ. ಯಾವುದೇ ಒಂದು ಕೆಲಸವನ್ನಾದರೂ ಕಾರ್ಯಗತ ಮಾಡಬೇಕಾದರೆ ಯಾವ ವಿಧಾನದಿಂದ ಕಾರ್ಯರೂಪಕ್ಕೆ ತರಬೇಕೆಂಬುದು ಬಹಳ ಮುಖ್ಯವಾದುದು. ಆದರೆ ಏನೋ ಒಂದು ನೀತಿಯನ್ನು ಇಟ್ಟುಕೊಂಡು ಒಮ್ಮೆಲೇ ಮಾಡಬೇಕೆಂದು ಹೊರಟರೆ ಅದು ಒಂದೇ ಸಾರಿಗೆ ಕಾರ್ಯಗತವಾಗುವುದಿಲ್ಲ. ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯಾಗಬೇಕೆಂಬ ಘೋಷಣೆಯನ್ನು ಸರ್ಕಾರ ಮಾಡಿದೆ, ಇದನ್ನು ನಾನೂ ಒಪ್ಪಿಕೊಳ್ಳುತ್ತೇನೆ; ಆದರೆ ನಾನು ಮೊದಲೇ ಹೇಳಿದಂತೆ ಇದನ್ನು ಕಾರ್ಯಗತ ಮಾಡಬೇಕಾದರೆ ಇದಕ್ಕೆ ತಕ್ಕಂಥ ವಿಧಾನದಲ್ಲಿ ಕೆಲಸಮಾಡಬೇಕಾಗಿದೆ. ಇದಕ್ಕಾಗಿ ಅತ್ಯಗತ್ಯವಾಗಿ ಬೇಕಾಗಿರತಕ್ಕ ಮತ್ತು ಇಂಗ್ಲಿಸ್ ಭಾಷೆಯಲ್ಲಿರತಕ್ಕ ಕಾನೂನು ಮತ್ತಿತರ ಪುಸ್ತಕಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಬೇಕಾಗಿರುವುದರಿಂದ ಇದಕ್ಕಾಗಿಯೇ ಒಂದು ಪ್ರತ್ಯೇಕವಾದ ಭಾಷಾಂತರ ವಿಭಾಗವನ್ನು ಸರ್ಕಾರ ತೆರೆದಿದೆ; ಇಷ್ಟು ಮಾತ್ರವಲ್ಲ, ಇದು ಕನ್ನಡ ಸಾಹಿತ್ಯ ಪರಿಷತ್ತಿನ ಜೊತೆಯಲ್ಲಿ ಸೇರಿಕೊಂಡು ಕೆಲಸಮಾಡುತ್ತಿದೆ ಎಂಬುದನ್ನು ಮಾನ್ಯ ಸದಸ್ಯರು ಮರೆಯಬಾರದು. ನಮ್ಮ ಅನೇಕ ಸರ್ಕಾರಿ ಅಧಿಕಾರಿಗಳೂ ಕೂಡ ಕನ್ನಡದಲ್ಲೇ ತೀರ್ಪುಗಳನ್ನು ಕೊಡಲು ಪ್ರಾರಂಭಿಸಿದ್ದಾರೆ. ಮುಂದಿನ ರಾಜ್ಯೋತ್ಸವದ ದಿನವನ್ನು ಆಚರಿಸುವ ಬಗ್ಗೆ ಶ್ರೀಮತಿ ಪ್ರಮೀಳಾರವರು ಏನು ಹೇಳಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ರಾಜ್ಯೋತ್ಸವ ದಿನ ಎಂದರೆ ಇದೇನೂ ಸಾಮಾನ್ಯವಾದ ದಿನವಲ್ಲ. ಇದೊಂದು ಚರಿತ್ರಾರ್ಹವಾದ ದಿನ. ಹರಿದು ಹಂಚಿಹೋಗಿದ್ದ ಕನ್ನಡದ ಭಾಗಗಳನ್ನೆಲ್ಲಾ ಒಂದು ಗೂಡಿಸಿದ ದಿನ, ಕರ್ನಾಟಕ ಎಂದು ಅಸ್ತಿತ್ವಕ್ಕೆ ಬಂದಂಥ ದಿನ. ಇಂಥ ಚರಿತ್ರಾರ್ಹವಾದ ದಿನವನ್ನು ಆಚರಿಸುವುದು ನಿಜಕ್ಕೂ ಪ್ರತಿಯೊಬ್ಬ ಕನ್ನಡಿಗನಿಗೂ ಒಂದು ಹೆಮ್ಮೆಯ ವಿಚಾರವೇ ಸರಿ. ಈ ದಿನವನ್ನು ಆಚರಿಸುವಾಗ ನಾವೆಲ್ಲರೂ ಒಮ್ಮನಸ್ಸಿನಿಂದ ಆಚರಿಸಬೇಕೆಂಬುದೇ ಅಲ್ಲದೆ ರಾಜ್ಯದ ಎಲ್ಲ ಹಂತಗಳಲ್ಲೂ ಕನ್ನಡ ಆಡಳಿತ ಭಾಷೆಯಾಗಬೇಕೆಂಬುದೇ ನನ್ನ ಇಚ್ಛೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಆದರೆ ಇದೇ ಸಂದರ್ಭದಲ್ಲಿ ನಾನು ಇನ್ನೂ ಒಂದು ಮಾತನ್ನು ಹೇಳಬೇಕಾಗಿದೆ, ಏನೆಂದರೆ, ಕರ್ನಾಟಕದಲ್ಲಿ ರಾಜ್ಯೋತ್ಸವವನ್ನು ಮಾಡುವುದಕ್ಕೂ ಮತ್ತು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೂ ಒಂದಕ್ಕೊಂದು ತಾಳ ಮೇಳ ಕಟ್ಟುವುದು ಸರಿಯಲ್ಲ. ನಿನ್ನೆಯ ದಿವಸ ಕನ್ನಡ ಸಾಹಿತ್ಯ ಪರಿಷತ್ತಿನ ಮಾನ್ಯ ಅಧ್ಯಕ್ಷರು ನನಗೆ ಒಂದು ಪತ್ರವನ್ನು ಬರೆದಿದ್ದಾರೆ, ಅದರ ಒಂದು ಪ್ರತಿ ನನ್ನಲ್ಲಿದೆ; ಅದರಲ್ಲಿ ಏನು ಹೇಳಿದ್ದಾರೆಂದರೆ,

> "ಕನ್ನಡವನ್ನು ಆಡಳಿತ ಭಾಷೆಯಾಗಿ ಎಲ್ಲ ಹಂತಗಳಲ್ಲೂ ಪೂರ್ಣವಾಗಿ ಜಾರಿಗೆ ತರಲು ಘನ ಸರ್ಕಾರದವರು ಸಾಕಷ್ಟು ಆಸಕ್ತಿಯಿಂದ ಇದುವರೆಗೂ ಪ್ರಯತ್ನಿಸಲಾಗಿರುವುದಕ್ಕೆ ಕನ್ನಡಿಗರು ಕೃತಜ್ಞರಾಗಿದ್ದಾರೆ. ಕನ್ನಡ ನಾಡಿಗೆ ಕರ್ನಾಟಕ ಎಂದು ನಾಮಕರಣ ಮಾಡಿದವರೂ ಕೂಡ ಇದೇ ಘನ ಸರ್ಕಾರದವರೇ ಎಂಬುದನ್ನು ಯಾರೂ ಮರೆಯುವಂತಿಲ್ಲ. ಕನ್ನಡಕ್ಕೆ ಇಷ್ಟೆಲ್ಲಾ ಶ್ರೇಷ್ಠ ಕಾರ್ಯ ಮಾಡಿರುವ ನಮ್ಮ ಸರ್ಕಾರ ಈ ಸಲದ ರಾಜ್ಯೋತ್ಸವದ ವೇಳೆಗೆ ಈ ಕನ್ನಡವನ್ನು ಆಡಳಿತ ಭಾಷೆಯಾಗಿ ಪೂರ್ಣವಾಗಿ ಎಲ್ಲ ಹಂತಗಳಲ್ಲೂ ಜಾರಿಗೆ ತರಬೇಕೆಂದು ಕಳಕಳಿಯಿಂದ ಪರಿಷತ್ತಿನ ಅಧ್ಯಕ್ಷರು ಮೊನ್ನೆ ದಿನ ಪತ್ರಿಕಾ ಸಂದರ್ಶನದಲ್ಲಿ ಮಾತನಾಡಿದ್ದಾರೆ. ಇದು ಕನ್ನಡಿಗರ ಪರವಾಗಿ ಸರ್ಕಾರಕ್ಕೆ ಮಾಡಿಕೊಂಡಿರುವ ವಿನಂತಿಯೇ ಹೊರತು ಮತ್ತೇನೂ ಅಲ್ಲ".

ಎಂದು ಬರೆದಿದ್ದಾರೆ. ಇದು ಕನ್ನಡ ಸಾಹಿತ್ಯ ಪರಿಷತ್ತಿನ ಸ್ಪಷ್ಟೀಕರಣ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಕನ್ನಡ ಸಾಹಿತ್ಯ ಪರಿಷತ್ತಿನ ಮಾನ್ಯ ಅಧ್ಯಕ್ಷರು ಏನು ಹೇಳಿದ್ದಾರೆ ಅದನ್ನು ಅವರು ಕಳಕಳಿಯಿಂದ ವ್ಯಕ್ತಪಡಿಸಿದ್ದಾರೆಂದು ತಿಳಿದುಕೊಳ್ಳಬೇಕೇ ಹೊರತು, ಅವರು ನಮಗೆ ಬೆದರಿಕೆ ಹಾಕಿದ್ದಾರೆಂದು ತಿಳಿದುಕೊಳ್ಳಬಾರದು.

ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಮಳ್ಳೂರು ಆನಂದರಾಯರು ಮಾತನಾಡುವಾಗ ಹಿಂದೀ ಹೇರಿಕೆಯ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಆದರೆ ನನಗಾದರೂ ಅನಿಸುತ್ತದೆ, ಬಹುಶಃ ಆ ಮಾತನ್ನು ಅವರು ಇಲ್ಲಿ ಹೇಳಬೇಕಾದ ಅಗತ್ಯವಿರಲಿಲ್ಲ ಎಂದು. ಅವರು ಏನು ಹೇಳಿದರು ಎಂದರೆ,

ಹಿಂದಿಯ ಬಗ್ಗೆ ಏನೋ ಒಂದು ಕೃತಕ ದ್ವೇಷ ಭಾವನೆಯನ್ನು ಉಂಟುಮಾಡಿದ್ದೇವೆ ಎಂದು. ಸ್ವಾಮಿ, ನಾನಾದರೂ ಹೇಳುತ್ತೇನೆ, ನಮ್ಮ ಕರ್ನಾಟಕದಲ್ಲಿ ಹಿಂದೀ ಭಾಷೆಯನ್ನೂ ಒಳಗೊಂಡಂಥ ತ್ರಿಭಾಷಾ ಸೂತ್ರವನ್ನು ನಾವು ಒಪ್ಪಿಕೊಂಡಿದ್ದೇವೆ. ಹಿಂದಿಯ ಬಗ್ಗೆ ನಮಗೆ ದ್ವೇಷ ಭಾವನೆ ಇದ್ದಿದ್ದರೆ ಈ ತ್ರಿಭಾಷಾ ಸೂತ್ರವನ್ನು ನಾವು ಒಪ್ಪಿಕೊಳ್ಳುತ್ತಲೇ ಇರಲಿಲ್ಲ. ಇವತ್ತು ಯಾವುದೇ ಒಂದು ಭಾಷೆಯನ್ನಾಗಲಿ ಅದನ್ನು ಜಾರಿಗೆ ತರಬೇಕಾದರೆ ಹಿಂದು ವಿಧಾನ, ಒಂದು ರೀತಿ ಇರುತ್ತದೆ. ಅದಕ್ಕೆ ತಕ್ಕಂತೆ ಕೆಲಸ ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ಬಲವಂತವಾಗಿ ಹೇರುವುದಲ್ಲ. ದೇಶದ ಸಮಗ್ರತೆಯನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಈ ದೇಶದ ಸಮಗ್ರತೆಯ ದೃಷ್ಟಿಯಿಂದ ಹಿಂದಿ ಸಂಪರ್ಕ ಭಾಷೆಯಾಗಿರುವುದು ಅಗತ್ಯವೆಂಬ ದೃಷ್ಟಿ ಇದೆ. ಆದರೆ ಹಿಂದಿಯನ್ನು ಒತ್ತಾಯಪೂರ್ವಕವಾಗಿ ಹೇಳುವುದಾದರೆ, ಇದೇ ದೇಶದ ಸಮಗ್ರತೆಗೆ ಭಂಗ ತರುತ್ತದೆ ಎಂಬುದನ್ನೂ ಮರೆಯಬಾರದು. ಆದ್ದರಿಂದ ನಾವು ಏನು ಹೇಳುತ್ತಿದ್ದೇವೆಂದರೆ ಜನಗಳು ತಾವಾಗಿಯೇ ಹಿಂದಿಯನ್ನು ಪ್ರೀತಿಯಿಂದ ಕಲಿಯುವಂತೆ ಪ್ರಯತ್ನಿಸೋಣ, ಅದುವರೆಗೂ ನೀವು ಇದನ್ನು ಬಲವಂತವಾಗಿ ನಮ್ಮ ಮೇಲೆ ಹೇರುವುದು ಬೇಡ ಎಂದು.

3–00 ಪಿ.ಎಂ.

ಶ್ರೀ ಜೆ. ಎಚ್. ಪಟೇಲ್.— ಮಾನ್ಯ ಮಂತ್ರಿಗಳು ಹೇಳಿದ್ದನ್ನು ನಾನಂ ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ನಾವು ಯಾವ ಭಾಷೆಯನ್ನೂ ಇನ್ನೊಬ್ಬರ ಮೇಲೆ ಹೇರಬಾರದು, ರಾಷ್ಟ್ರಭಾಷೆಯನ್ನು ಪ್ರೀತಿಸಿ ಕಲಿಯಬೇಕು ಎನ್ನುವ ತಮ್ಮ ನಿಲುವನ್ನು ನಾವು ಸಂಪೂರ್ಣವಾಗಿ ಒಪ್ಪುತ್ತೇವೆ. ಅದೇ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಸುಮಾರು ೯೦ ರಷ್ಟು ಜನರ ಮೇಲೆ ಇಂಗ್ಲೀಷ್ ಭಾಷೆಯನ್ನು ಹೇರುತ್ತಿದ್ದೀರಿ, ಇವರಿಗೆ ಕನ್ನಡ ಮಾತ್ರ ಗೊತ್ತಿರುವುದು. ಇಂಗ್ಲೀಷನ್ನು ಏಕೆ ಅವರ ಮೇಲೆ ಹೇರುತ್ತೀರಿ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ತಾವು ಒಪ್ಪಿಕೊಂಡಿದ್ದಕ್ಕೆ ನನ್ನ ಧನ್ಯವಾದಗಳು ಮಾನ್ಯ ಪಟೇಲರು ೯೦ ಭಾಗ ಕನ್ನಡಿಗರಲ್ಲಿ ಇಂಗ್ಲಿಷ್ ಭಾಷೆಯನ್ನು ಹೇರುತ್ತೀರಿ ಎನ್ನುವ ವಿಚಾರಪನ್ನು ಹೇಳಿದ್ದಾರೆ. ಆದರೆ ಅವರ ಅಭಿಪ್ರಾಯದ ವ್ಯತ್ಯಾಸ ಇದು. ಇಂಗ್ಲೀಷನ್ ನಾವು ಹೇರುತ್ತಿಲ್ಲ, ಹೇರಿದಂಥ ಇಂಗ್ಲಿಷನ್ನು ನಾವು ಕಡಿಮೆ ಮಾಡುತ್ತಿದ್ದೇವೆ. ಇಂಗ್ಲೀಷ್ ಭಾಷೆಯನ್ನು ತೆಗೆಯಬೇಕು ಎಂದು ಮಾತ್ರ ನಾವು ಹೇಳುತ್ತಿದ್ದೇವೆ. ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವ ಧಿಸೆಯಲ್ಲಿ ಹೇರಿದ್ದಂಥ ಇಂಗ್ಲೀಷನ್ನು ನಾವು ಕಡಿಮೆ ಮಾಡುತ್ತಿದ್ದೇವೆ ಎನ್ನುವ ಒಂದು ನಿದರ್ಶನವನ್ನು ಮಾತ್ರ ನಾನು ಹೇಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಭೆಯ ಮುಂದೆ ಅಜೆಂಡದಲ್ಲಿರತಕ್ಕ ೨–೩ ವಿಷಯಗಳ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ಎರಡು ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ, ಹಂತ ಹಂತವಾಗಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ನಾವುಗಳು ಉಳಿದ ರಾಜ್ಯಗಳನ್ನು ನೋಡಿದಾಗ ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ ಅಥವಾ ಉತ್ತರದ ಯಾವ ರಾಜ್ಯದಲ್ಲಿಯೇ ಆಗಲೀ ಆಯಾ ದೇಶ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡುವ ಮಾರ್ಗದಲ್ಲಿ ಅವರು ನಮ್ಮ ರಾಜ್ಯಕ್ಕಿಂತ ಬಹುದೂರ ಹೋಗಿದ್ದಾರೆ. ನಾನು ಮೊನ್ನೆ ಕೊಲ್ಲಾಪುರಕ್ಕೆ ಹೋದಾಗ, ಅಲ್ಲಿ ಒಂದು ಅರ್ಜಿಯನ್ನು ಇಂಗ್ಲೀಷ್‌ನಲ್ಲಿ ಟೈಪು ಮಾಡಿಸಬೇಕಾಗಿತ್ತು ಆದರೆ ಅಲ್ಲಿ ಇಂಗ್ಲೀಷ್ ಟೈಪ್‌ರೈಟರ್ ಸಿಕ್ಕಲಿಲ್ಲ. ಸಾಯಂಕಾಲ ಕೊನೆಯಲ್ಲಿ ಎಲ್ಲಿಯೋ ಒಂದು ಕಡೆ ಟೈಪ್‌ರೈಟರ್ ಸಿಕ್ಕಿತು. ಅಲ್ಲಿ ಎಲ್ಲಾ ಕಡೆಯಲ್ಲಿಯೂ ಮರಾಠಿ ಟೈಪ್‌ರೈಟರ್‌ಗಳೇ, ಸಂಪೂರ್ಣವಾಗಿ ಮರಾಠಿಯಲ್ಲಿ, ಕೋರ್ಟಿನಲ್ಲಿಯೂ ಸಹ ಜಡ್ಜಮೆಂಟನ್ನು ಬರೆಯುತ್ತಿದ್ದಾರೆ. ೧೯೫೬ ರಿಂದ ಈಚೆಗೆ ಅವರು ಇಷ್ಟೊಂದು ಮುಂದು ಹೋಗಿದ್ದಾರೆ. ನಾವು ಅವರ ಜೊತೆಗೆ ಇನ್ನೂ ಬಂದಿಲ್ಲ. ಅವರು ಯಾವ ರೀತಿಯಿಂದ ಮಾಡಿದ್ದಾರೆ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ತಮಿಳುನಾಡಿನಲ್ಲಿ ಪ್ರತಿಯೊಂದು ಹಂತದಲ್ಲಿಯೂ ತಮ್ಮ ತಮ್ಮ ರಾಜ್ಯ ಭಾಷೆಯನ್ನು ಬಳಸುತ್ತಿದ್ದಾರೆ. ನಮ್ಮ ಸರ್ಕಾರದಲ್ಲಿ ಇದರ ಬಗ್ಗೆ ನೀತಿ ಮಾತ್ರ ಇದ್ದರೆ ಸಾಲದು. ಬರೀ ಫೋಪಣೆಗಳನ್ನು ಮಾಡಿದರೆ ಸಾಲದು, ಆದರೆ ಇದರ ಬಗ್ಗೆ ಮುಂದೆ ಹೆಜ್ಜೆ ಇಡುತ್ತಿಲ್ಲ. ಅವರು ಸ್ಕೂಲು ಪುಸ್ತಕಗಳನ್ನು, ಅಂದರೆ ಫಿಸಿಕ್ಸ್, ಕೆಮಿಸ್ಟ್ರಿ ಮುಂತಾದ ಸಬ್ಜೆಕ್ಟ್‌ಗಳನ್ನು ಅವರ ಭಾಷೆಗೆ ಭಾಷಾಂತರಿಸಿಕೊಂಡಿದ್ದಾರೆ. ಕಳೆದ ೧೫–೨೦ ವರ್ಷದಲ್ಲಿ ಅವರು ಅನೇಕ ಗ್ರಂಥಗಳನ್ನು ತಮ್ಮ ಭಾಷೆಯಲ್ಲಿ ಬರೆಯಿಸಿದ್ದಾರೆ,

ಪರೀಕ್ಷೆಗಳನ್ನು ಅವರ ಭಾಷೆಯಲ್ಲಿ ಮಾಡುತ್ತಿದ್ದಾರೆ. 'ಮನಸ್ಸಿದ್ದರೆ ಮಾರ್ಗ' ಇದೆ. ನಾವು ಒಂದಾಗಿ ೨೩ ವರ್ಷಗಳಾದರೂ ಇನ್ನೂ ತಾಲ್ಲೂಕಿನ ಮಟ್ಟದಲ್ಲಿಯೇ ಕನ್ನಡ ಭಾಷೆ ಇಲ್ಲ ಎಂದು ಹೇಳಿದರೆ ಹೇಗೆ? ಇನ್ನೂ ಸಹ ಇಂಗ್ಲೀಷಿನಲ್ಲಿಯೇ ಎಲ್ಲಾ ವ್ಯವಹಾರಗಳು ನಡೆಯುತ್ತಿವೆ. ಸರ್ಕಾರ ಇದರ ಬಗ್ಗೆ ಸರಿಯಾದ ಕ್ರಮಗಳನ್ನು ಯಾವ ರೀತಿಯಲ್ಲಿ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿಲ್ಲ. ಸಾಹಿತ್ಯ ಪರಿಷತ್ತು ಸರ್ಕಾರದ ಜೊತೆಗೆ ನಡೆಯುತ್ತಿದೆ. ಅವರೂ ಕೂಡ ಬಹಳ ಮಂದಗತಿಯಲ್ಲಿ ನಡೆಯುತ್ತಿದ್ದಾರೆ. ಭಾಷಾಂತರ ಮಾಡತಕ್ಕ ವಿಚಾರದಲ್ಲಿಯಾಗಲೀ, ಪುಸ್ತಕಗಳನ್ನು ಬರೆಯಿಸತಕ್ಕ ವಿಚಾರದಲ್ಲಿಯಾಗಲೀ, ಶಾಲಾಕಾಲೇಜುಗಳಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡವನ್ನು ಕಲಿಸತಕ್ಕ ವ್ಯವಸ್ಥೆ, ಸರ್ಕಾರದಲ್ಲಿ ಇದನ್ನು ಆಡಳಿತ ಭಾಷೆಯನ್ನಾಗಿ ಮಾಡತಕ್ಕ ವ್ಯವಸ್ಥೆಯಿಲ್ಲ. ಇದಕ್ಕೆ ನಮ್ಮ ಸರ್ಕಾರ ಬಹಳ ಹಿಂದೆ ಬಿದ್ದಿದೆ. ಆಮೆ ಹೆಜ್ಜೆ ಇಡುತ್ತಿದೆ. ಬಹುಶಃ ಹಿಂದೂಸ್ಥಾನದಲ್ಲಿಯೇ, ನಾವು ಈ ದಿಸೆಯಲ್ಲಿ ಬಹಳ ಹಿಂದುಳಿದಿದ್ದೇವೆ. ಉಳಿದ ರಾಜ್ಯಗಳಿಗೆ ನಾವು ಹೋಲಿಕೆಮಾಡಿ ನೋಡಿದಾಗ ಬಹಳ ಹಿಂದೆ ಬಿದ್ದಿದ್ದೇವೆ. ತಾವು ಕೂಡಲೆ ಇದರ ಬಗ್ಗೆ ಒಂದು ಟೈಂ ಬೌಂಡ್ ಪ್ರೋಗ್ರಾಂ ಹಾಕಿಕೊಂಡು ಇಂತಿಷ್ಟು ದಿವಸದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುತ್ತೇವೆ ಎಂದು ಹೇಳಬೇಕು, ಇಲ್ಲದೇ ಹೋದರೆ ಇದು ಆಗುವುದಿಲ್ಲ. ಮೇಲಿನ ವರ್ಗದ ಅಧಿಕಾರಿಗಳು ಏನು ಇದ್ದಾರೆ ಅವರು ಈ ಬಗ್ಗೆ ಸಾಕಷ್ಟು ಕಾತುರರಾಗಿಲ್ಲ. ಅವರು ಇನ್ನೂ ಇಂಗ್ಲಿಷ್ ಮೋಹವನ್ನು ಬಿಟ್ಟಿಲ್ಲ. ನಾನು ಅವರ ಬಗ್ಗೆ ಟೀಕೆ ಮಾಡುತ್ತಿಲ್ಲ. ಆದರೆ ಇದರಿಂದ ಏನಾಗುತ್ತದೆ ಎಂದರೆ, ಸಾಮಾಜಿಕ ನ್ಯಾಯ ತರಬೇಕು ಎಂದು ಹೇಳುತ್ತೇವೆ, ಅದು ಕೂಡ ನಮ್ಮ ಜನರಿಗೆ ಸಿಕ್ಕುತ್ತಿಲ್ಲ. ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಹಳ್ಳಿಯಿಂದ ಬಂದಂಥ ಹುಡುಗ ಇಂಗ್ಲೀಷ್‌ನಲ್ಲಿ ಉತ್ತರ ಕೊಡಬೇಕಾದರೆ ಎಷ್ಟು ಕಷ್ಟವಾಗುತ್ತದೆ? ಗ್ರಾಮಾಂತರ ಪ್ರದೇಶದಿಂದ ಬಂದವರು ಪಟ್ಟಣದವರೊಂದಿಗೆ ಸ್ಪರ್ಧೆ ಮಾಡಬೇಕಾಗುತ್ತದೆ. ಇಲ್ಲಿ ಇವನಿಗೆ ಸಾಮಾಜಿಕ ನ್ಯಾಯ ಸಿಕ್ಕುವುದಿಲ್ಲ. ಆದ್ದರಿಂದ ತಾವು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡದೇ ಹೋದರೆ, ರಾಜ್ಯ ಭಾಷೆಯನ್ನಾಗಿ ಮಾಡದೇ ಹೋದರೆ ಇಡೀ ಕರ್ನಾಟಕದ ಜನತೆಗೆ ಸಮಗ್ರವಾಗಿ ನ್ಯಾಯ ದೊರಕಿಸಿದಂತಾಗುವುದಿಲ್ಲ. ದಯಮಾಡಿ ಸರ್ಕಾರ ಈ ಬಗ್ಗೆ ಕೂಡಲೇ ಕಾರ್ಯಕ್ರಮ ತೆಗೆದುಕೊಂಡು ನಿಶ್ಚಿತವಾದ ಅವಧಿಯಲ್ಲಿ ಇದನ್ನು ಜಾರಿಗೆ ತರುತ್ತಿರಿ ಎನ್ನುವ ಭರವಸೆಯನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ವಿರೋಧ ಪಕ್ಷದ ನಾಯಕರು, ಕನ್ನಡ ಆಡಳಿತ ಭಾಷೆಯ ಬಗ್ಗೆ ಕೆಲವು ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ ಮಾನ್ಯ ಸದಸ್ಯರು, ಕರ್ನಾಟಕ ತಮಿಳುನಾಡಲ್ಲ ಎನ್ನುವುದನ್ನು ಮಾತ್ರ ನೆನಪಿನಲ್ಲಿಟ್ಟುಕೊಳ್ಳಬೇಕು. ಕೇರಳದಲ್ಲಿಯೇ ಆಗಲೀ, ಮಹಾರಾಷ್ಟ್ರದಲ್ಲಿಯೇ ಆಗಲೀ ಇದರ ಬಗ್ಗೆ ಅನುಸರಿಸತಕ್ಕ ರೀತಿಯೇ ಬೇರೆ? ಇಲ್ಲಿ ಅನುಸರಿಸತಕ್ಕ ನೀತಿಯೇ ಬೇರೆ. ಅವರು ತಮಿಳು ಮಾತ್ರ ರಾಜ್ಯ ಭಾಷೆಯಾಗಿರಬೇಕು, ಬೇರೆಯವರದು ಬೇಡ ಎನ್ನುವುದು ಒಂದು ವಾದ ಇದೆ. ಅದನ್ನು ನಾವು ಇಲ್ಲಿ ಒಪ್ಪಿಕೊಳ್ಳುವುದಕ್ಕೆ ತಯಾರು ಇಲ್ಲ. ಕರ್ನಾಟಕ ದೇಶ ಪ್ರಪಂಚದಲ್ಲಿಯೇ ಪ್ರಾಮುಖ್ಯತೆಯನ್ನು ಹೊಂದಿದೆ. ಯಾವ ರಾಜ್ಯದವರೂ ಬೇಕಾದರೆ ಇಲ್ಲಿ ಬಂದು ನಲೆಸಬಹುದು. ಪ್ರಪಂಚದಲ್ಲಿ ಯಾವ ಯಾವ ಜನಕ್ಕಾದ್ದಾರೂ ಕರ್ನಾಟಕದಲ್ಲಿ ಸ್ವಾಗತ ಉಂಟು. ಇವರು ಬೇರೆಯವರು ನಮ್ಮಲ್ಲಿರುವುದು ಬೇಡ ಎನ್ನುವುದು ಭಾವನೆಯಿಲ್ಲ. ಕರ್ನಾಟಕದಲ್ಲಿ ಬೇಕೆಯವರು ನೆಲೆಸುವುದಕ್ಕೆ ಯಾವ ಪ್ರತಿಬಂಧಕವೂ ಇಲ್ಲ. ಯಾರೂ ಬೇಕಾದರೂ ಬಂದು ನೆಮ್ಮದಿಯಾಗಿರಬಹುದು ಕರ್ನಾಟಕದಲ್ಲಿ ಕನ್ನಡವನ್ನು ರಾಜ್ಯ ಭಾಷೆಯನ್ನಾಗಿ ಮಾಡುವ ಪ್ರಸಂಗದಲ್ಲಿ ನಾನೂ ಕೂಡ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದೇನೆ. ಮಾನ್ಯ ನಿಜಲಿಂಗಪ್ಪನವರು ಇದರ ಅಧ್ಯಕ್ಷರಾಗಿದ್ದರು. ದೇಶದ್ಯಾಂತ ನಾವು ತಿರುಗಿ ಕೆಲಸ ಮಾಡಿದ್ದೇವೆ. ಆದ್ದರಿಂದ ನಮಗೆ ಇದರ ಬಗ್ಗೆ ಮಮತೆ ಇಲ್ಲವೆಂದಲ್ಲ. ಕನ್ನಡ ಭಾಷೆ, ರಾಜ್ಯ ಭಾಷೆಯಾಗಬೇಕು, ಇದನ್ನು ಯಾವ ರೀತಿಯಲ್ಲಿ ಜಾರಿಗೆ ತರಬೇಕು ಎನ್ನುವುದನ್ನು ನಾವು ಯೋಚನೆ ಮಾಡುತ್ತಿದ್ದೇವೆ. ಸರ್ಕಾರದವರು ಇದರ ಬಗ್ಗೆ ತ್ವರಿತವಾಗಿ ಯೋಚನೆ ಮಾಡುತ್ತಿದೇವೆ. ಆದರೆ ನಮ್ಮಲ್ಲಿರುವ ಅಧಿಕಾರಿ ವರ್ಗ ಏನು ಇದೆ, ಅವರೆಲ್ಲರೂ ಕನ್ನಡದಲ್ಲಿ ವ್ಯವಹಾರ ಮಾಡಬೇಕು, ಅವರು ಮಾಡುತ್ತಿಲ್ಲ. ಈ ದಿಸೆಯಲ್ಲಿ ನಾವು ರೆವಿನ್ಯೂ ಇಲಾಖೆಯಲ್ಲಿ ಒತ್ತಾಯ ಮಾಡಿದ್ದೇವೆ. ಕೆಲವರು ಕನ್ನಡವನ್ನು ಕಲಿತುಕೊಂಡಿದ್ದರೂ ಸಹ ಬರೆಯಲಿಕ್ಕೆ ಗೊತ್ತೇ ಇಲ್ಲ. ಸರಿಯಾಗಿ ಕೆಲವರು ಬರೆಯುತ್ತಲೇ ಇಲ್ಲ. ಇದರ ಬಗ್ಗೆ ಅವರು ಪ್ರಯತ್ನ ಮಾಡಲಿಕ್ಕೆ ಅಂಜುತ್ತಾರೆಯೋ ಏನೋ ಇದು ನಮಗೆ ಗೊತ್ತಾಗುತ್ತಿಲ್ಲ. ಕನ್ನಡ ಭಾಷೆ ಆಡಳಿತದಲ್ಲಿ ಬರಬೇಕು, ಬಹುತೇಕ ಅಧಿಕಾರಿಗಳು ಕನ್ನಡದಲ್ಲಿ ವ್ಯವ

ಹಾರ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾ ಇಲ್ಲ. ಪ್ರಯತ್ನ ಮಾಡಿದಂಥವರಿಗೆ ನಾವು ಕೆಲವಾರು ಬೆನಿಫಿಟ್ಸ್ ಕೊಡುತ್ತಿದ್ದೇವೆ. ಆದರೂ ಅವರು ಕನ್ನಡದಲ್ಲಿ ವ್ಯವಹಾರ ಮಾಡಲಿಕ್ಕೆ ಹಿಂಜರಿಯುತ್ತಿದ್ದಾರೆ. ಸ್ಪಷ್ಟವಾಗಿ ವಿಚಾರಗಳನ್ನು ಕನ್ನಡ ಭಾಷೆಯಲ್ಲಿ ವ್ಯಕ್ತ ಪಡಿಸಲಿಕ್ಕೆ ಅಧಿಕಾರಿಗಳು ಅಸಮರ್ಥರಾಗಿದ್ದಾರೆ. ಏಕೋ ಇದು ನನಗರ್ಥವಾಗುತ್ತಿಲ್ಲ. ಕನ್ನಡದಲ್ಲಿ ಆರ್ಡರ್ಸ್ ಬರೆಯುವಾಗ ಕನ್ನಡದಲ್ಲಿ ಒಂದು ಪೇಜ್ ಬರೆಯಬೇಕಾದರೂ ಸಹ ಅನೇಕ ತಪ್ಪುಗಳನ್ನು ಬರೆಯುತ್ತಾರೆ. ಇವರಿಗೆ ಭಾಷೆಯ ಅಭ್ಯಾಸ ಇಲ್ಲವೋ, ಭಾಷೆಯನ್ನು ಕಲಿಯಲಿಕ್ಕೆ ಪ್ರಯತ್ನ ಮಾಡಲಿಲ್ಲವೋ, ಅಥವಾ ಕಲಿತಿರತಕ್ಕ ಭಾಷೆಯನ್ನು ವ್ಯಕ್ತ ಪಡಿಸಲಿಕ್ಕೆ ಅಭಾವ ಇದೆಯೋ ಏನೋ ಗೊತ್ತಾಗುತ್ತಿಲ್ಲ.

ಶ್ರೀ ಜೆ.ಎಚ್. ಪಟೇಲ್.—ಬೇರೆ ರಾಜ್ಯಗಳವರು ಈ ದಿಸೆಯಲ್ಲಿ ಏನು ಮಾಡಿರಬಹುದು ಎಂದು ತಾವು ಆಲೋಚನೆ ಮಾಡಿ?

ಶ್ರೀ ಬಿ. ಬಸವಲಿಂಗಪ್ಪ.—ನಾನು ತಮಿಳ್ನಾಡಿಗೆ ಹಲವಾರು ಬಾರಿ ಹೋಗಿದ್ದೇನೆ. ಅಲ್ಲಿ ತಮಿಳನ್ನೇ ರಾಜ್ಯ ಭಾಷೆಯಾಗಿ ಇಟ್ಟುಕೊಂಡಿದ್ದಾರೆ. ಬಹುಪಾಲು ತಮಿಳಿನಲ್ಲೇ ವ್ಯವಹಾರ ಮಾಡುತ್ತಿದ್ದಾರೆ. ವಿರಳವಾಗಿ ಇಂಗ್ಲೀಷ್‌ನಲ್ಲಿ ಮಾಡುತ್ತಿದ್ದಾರೆ. ಮಹಾರಾಷ್ಟ್ರದಲ್ಲೂ ಕೂಡ ಅದೇ ರೀತಿ ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಕನ್ನಡ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕೆಂಬ ಸರ್ಕಾರದ ಕಳಕಳಿ, ಪ್ರಯತ್ನ ಏನಿದೆ ಅದನ್ನು ಯಾರೂ ಕೂಡ ಪ್ರಶ್ನೆ ಮಾಡಬೇಕಾಗಿಲ್ಲ, ನಾವು ಸಾಕಷ್ಟು ಪ್ರಯತ್ನ ಮಾಡುತ್ತೀದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಹೇಳಿದ್ದು ತಮಗೆ ಅರ್ಥವಾಗಿಲ್ಲವೆಂದು ಕಾಣುತ್ತದೆ ನಾವು ಸರ್ಕಾರದ ಉದ್ದೇಶವನ್ನು ಪ್ರಶ್ನೆ ಮಾಡಲಿಲ್ಲ. ಸರ್ಕಾರದ ನೀತಿಯನ್ನು ಒಪ್ಪುತ್ತೇನೆ. ಬರಿ ನೀತಿ ಘೋಷಣೆಗಳನ್ನು ಮಾಡಿದರೆ ಸಾಲದು, ಕಾರ್ಯಕ್ರಮ ಬೇಕು. ಅದು ಇಲ್ಲ ಎಂದು ಹೇದ್ದೇವೆ. ಉಳಿದ ರಾಜ್ಯಗಳಲ್ಲಿ ಯಾವ ರೀತಿ ಮಾಡಿದರೋ ಅಂಥ ಕಾರ್ಯಕ್ರಮ ಇಲ್ಲಿ ಇಲ್ಲವೆಂಬುದನ್ನು ತಾವೇ ಒಪ್ಪಿಕೊಳ್ಳುತ್ತೀರಿ. ಇಲ್ಲಿರತಕ್ಕ ಅಧಿಕಾರಿಗಳಿಗೆ ಕನ್ನಡದಲ್ಲಿ ಸರಿಯಾಗಿ ಬರೆಯಲಿಕ್ಕೆ ಬರುವುದಿವೆಂದರೆ ಅಂಥವರು ಈ ರಾಜ್ಯದಲ್ಲಿ ಇರತಕ್ಕದ್ದಲ್ಲ. ಕರ್ನಾಟಕ ರಾಜ್ಯದಲ್ಲಿ ಕನ್ನಡವನ್ನು ಬರೆಯಲಿ ಬಾರದವರು ಇರಕೂಡದು. ಹುಚ್ಚು ಹೋಗದೆ ಮದುವೆಯಾಗುವಂತಿಲ್ಲ, ಮದುವೆಯಾಗದೆ ಹುಚ್ಚ ಹೋಗುವುದಿಲ್ಲ ಎಂಬಂತೆ ಸರಿಯಾದ ರೀತಿಯಲ್ಲಿ ಹೆಜ್ಜೆ ಇಡದಿದ್ದರೆ ನೂರು ವರ್ಷವಾದರೂ ಸಹ ಕನ್ನ ಆಡಳಿತ ಭಾಷೆಯಾಗುವುದಿಲ್ಲ. ಉಳಿದ ರಾಜ್ಯಗಳಲ್ಲಿ ಯಾವ ರೀತಿ ತ್ವರಿತ ಕ್ರಮಗಳನ್ನು ಕೈಗೊಂಡ ಉದ್ದೇಶವನ್ನು ಈಡೇರಿಸಿದ್ದಾರೆ ಅದೇ ರೀತಿ ನಮ್ಮ ಸರ್ಕಾರವು ಕೂಡ ಮಾಡಬೇಕೆಂದು ಹೇಳುತ್ತೇನೆ ಅದಕ್ಕೆ ಒಂದು ಕಾಲಾಮಿತಿಯನ್ನು ಹಾಕಿಕೊಳ್ಳಬೇಕು, ಇಲ್ಲದಿದ್ದರ ಕಾರ್ಯಕ್ರಮ ಜಾರಿಯಲ್ಲಿ ಬರುವುದಿಲ್ಲ. ಇರುವ ಅಧಿಕಾರಿಗಳಿಗೆ ಅಜ್ಞೆಯನ್ನು ಬರೆಯಲಿಕ್ಕೆ ಬಾರದಿದ್ದರೆ. ಬರೆಯಲಿಕ್ಕೆ ಬರುವ ಬೇರೆಯವರನ್ನು ನೇಮಿಸಿಕೊಳ್ಳಿ ಕರ್ನಾಟಕ ರಾಜ್ಯದಲ್ಲಾಗಲೀ ಅಥವಾ ರಾಷ್ಟ್ರದಲ್ಲಾಗಲೀ ಯಾರು ಬೇಕಾದರೂ ವಾಸಿಸಬಹುದು, ಆದರೆ ಆಯಾಯ ರಾಜ್ಯದ ಭಾಷಗಳಿಗೆ ಇರತಕ್ಕ ಸ್ಥಾನವನ್ನು ಕೊಡದೆ ಹೋದರೆ ನಮ್ಮ ಕರ್ತವ್ಯ ಚ್ಯುತಿಯಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದನ್ನು ಒಪ್ಪುತ್ತಾ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತೇನೆ. ಎಲ್ಲಿಯವರೆಗೆ ಆಲ್ ಇಂಡಿಯ ಅಡ್ಮಿನಿಸ್ಟ್ರೇಟೀವ್ ಸರ್ವೀಸ್ ಈ ದೇಶದಲ್ಲಿರುತ್ತದೋ ಅಲ್ಲಿಯವರೆಗೆ ಆಡಳಿತ ಭಾಷೆಯನ್ನು ಅವರ ಮೇಲೆ ಹೇರುವುದಕ್ಕಾಗುವುದಿಲ್ಲ. ೪೫ ವರ್ಷದವರೆಗೆ ಹಾಗೆ ಇರುತ್ತಾರೆ, ನಂತರ ಎಕ್ಸ್‌ಮೆಷನ್ ಕೊಡಿ ಎನ್ನುತ್ತಾರೆ. ಅದಕ್ಕೋಸ್ಕರ ಇದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳಿಗೆ ವಿಚಾರ ಸರಿಯಾಗಿ ಗೊತ್ತಿಲ್ಲವೆಂದು ಕಾಣುತ್ತದೆ. ಐ.ಎ ಎಸ್. ಅಧಿಕಾರಿಗಳು ಕನ್ನಡವನ್ನು ಚೆನ್ನಾಗಿ ಓದುತ್ತಾರೆ ಮತ್ತು ಬರೆಯುತ್ತಾರೆ, ಆದರೆ ಉಳಿದ ರೆವಿನ್ಯೂ ಅಧಿಕಾರಿಗಳು ಮತ್ತು ಕೆಳಮಟ್ಟದ ಅಧಿಕಾರಿಗಳು ಕನ್ನಡವನ್ನು ಸರಿಯಾಗಿ ಬರೆಯುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ಅನುಭವವನ್ನು ನೀವು ಹೇಳಿದಿರಿ. ಭಾಷೆಯನ್ನು ಮಾತನಾಡುವವರಿಗೆ ಓದುವುದಕ್ಕೆ ಬರುವುದಿಲ್ಲ ಓದುವುದಕ್ಕೆ ಬರುವವರಿಗೆ ಸರಿಯಾಗಿ ಬರೆಯುವುದಕ್ಕೆ ಬರುವುದಿಲ್ಲ, ಬರೆಯುವುದಕ್ಕೆ ಪ್ರಾವೀಣ್ಯತೆ ಬೇಕು. ಭಾಷೆಯಲ್ಲಿ ಪ್ರಾವೀಣ್ಯತೆಯನ್ನು ಹೊಂದದಿದ್ದರೆ ತನ್ನ ಅಭಿಪ್ರಾಯನ್ನು ವ್ಯಕ್ತ ಪಡಿಸುವುದಕ್ಕೆ ಅಗುವುದಿಲ್ಲ. ಆದ್ದರಿಂದ, ಇದನ್ನು ನಾವು ನೀವು ತಿಳಿದುಕೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಐ.ಎ.ಎಸ್. ಅಧಿಕಾರಿಗಳು ತಮಿಳ್ನಾಡಿನಲ್ಲಿ ಯಾವ ರೀತಿ ಕೆಲಸ ಮಾಡುತ್ತಾರೆ ?

ಶ್ರೀ ಬಿ. ಬಸವಲಿಂಗಪ್ಪ, – ಆಲ್ ಇಂಡಿಯ ಅಡ್ಮಿನಿಸ್ಟ್ರೇಟೀವ್ ಸರ್ವೀಸನ್ನು ಕೆಲವು ರಾಜ್ಯಗಳು ಒಪ್ಪುವುದಿಲ್ಲ. ಕೆಲವು ರಾಜ್ಯಗಳು ಒಪ್ಪಿಕೊಂಡಿವೆ. ನಾವು ಬಹಳ ಸಮದೃಷ್ಟಿ ಯನ್ನಿಟ್ಟುಕೊಂಡು ಯಾವ ಅಧಿಕಾರಿಗಳನ್ನು ಕೊಟ್ಟರೂ ಒಪ್ಪಿಕೊಂಡಿದ್ದೇವೆ. ಅವರನ್ನು ನಾವು ಇಲ್ಲಿ ಇಟ್ಟುಕೊಂಡು ಅವರ ಸೇವೆಯನ್ನು ಪಡೆಯುತ್ತಿದ್ದೇವೆ. ಆದ್ದರಿಂದ ನಾವು ಒಂದು ಕಡೆ ಒಪ್ಪಿಕೊಳ್ಳುವುದು, ಇನ್ನೊಂದು ಕಡೆ ಕನ್ನಡವನ್ನು ಕಲಿಯಲ್ಲಿಲ್ಲ, ವ್ಯವಹಾರ ಮಾಡಲಿಲ್ಲವೆಂದು ಹೇಳುವ ಬಗ್ಗೆ ಸ್ವಲ್ಪ ಯೋಚಿಸಬೇಕಾಗುತ್ತದೆ ಆದಕಾರಣ ನಾವು ಎಲ್ಲಿಯವರೆಗೆ ಈ ನೀತಿಯನ್ನು ಬದಲಾವಣೆ ಮಾಡುವುದಿಲ್ಲವೋ ಅಲ್ಲಿಯವರೆಗೆ ಇಂಗ್ಲೀಷ್‌ನಲ್ಲಿ ಮತ್ತು ಕನ್ನಡದಲ್ಲಿ ವ್ಯವಹಾರಮಾಡಬೇಕಾಗುತ್ತದೆ ಒಟ್ಟಿನಲ್ಲಿ, ಕನ್ನಡ ಭಾಷೆಗೆ ಪ್ರಾಮುಖ್ಯತೆ ಕೊಟ್ಟು ಹಂತಹಂತವಾಗಿ ಆಡಳಿತ ಭಾಷೆಯನ್ನಾಗಿ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆಂದುಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ನಮ್ಮ ಆಪದಾನೆ ಏನೆಂದರೆ, ಸರ್ಕಾರಕ್ಕೆ ಏನು ಒಂದು ಕಳಕಳಿ ಇರಬೇಕೋ ಆ ಕಳಕಳಿಇಲ್ಲ ಎಂದು. ಕೇವಲ ಘೋಷಣೆಗಳು ನಡೆಯುತ್ತವೆಯೇ ವಿನಹ ಅವನ್ನು ಕಾರ್ಯರೂಪದಲ್ಲಿ ತರುವುದಿಲ್ಲವೆಂದು ನಮ್ಮ ಆಪಾದನೆ. ಮಾನ್ಯ ಜೆ.ಹೆಚ್. ಪಟೇಲರು ಮಾತನಾಡುವಾಗ ಮಾನ್ಯ ವಿದ್ಯಾ ಮಂತ್ರಿಗಳು ಒಂದು ಘೋಷಣೆಯನ್ನು ಹೇಳಿದರು. ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡಿದೇವೆ. ಮತ್ತು ಅದನ್ನು ಕಾರ್ಯಗತ ಮಾಡುತ್ತಿದ್ದೇವೆ ಎಂದು. ನೀವು ಇವತ್ತು ಶಿಕ್ಷಣ ಮಂತ್ರಿಗಳಾಗಿದ್ದೀರಿ. ಶಾಲಾ ಮಟ್ಟದಲ್ಲಿ ತ್ರಿಭಾಷಾ ಸೂತ್ರವನ್ನು ಹೇಗೆ ಕಾರ್ಯಗತಗೊಳಿಸಿದ್ದೀರಿ ಎಂಬುದನ್ನು ನೋಡಿದರೆ ಕನ್ನಡಕ್ಕೆ ಸಮಾಧಿ, ಹಿಂದಿ ಬರುವಂತಿಲ್ಲ, ಇಂಗ್ಲೀಷ್ ರಾರಾಜಿಸುತ್ತಿದೆ. ಇದು ನಿಮ್ಮ ನೀತಿ. ಕನ್ನಡ ಪ್ರಭದಲ್ಲಿ ಒಂದು ಆರ್ಟಿಕಲ್ ಬಂದಿದೆ, ಅದನ್ನು ಬೇಕಾದರೆ ತಮಗೆ ಕೊಡುತ್ತೇನೆ ಅಧ್ಯಯನ ಮಾಡಿ ನೋಡಿ. ತಾವು ಶಾಲಾ ಮಟ್ಟದಲ್ಲಿ ಇವತ್ತು ಏನು ತ್ರಿಭಾಷಾ ನೀತಿಯನ್ನು ಆಚರಣೆಗೆ ತಂದಿದ್ದೀರಿ ಅದನ್ನು ಇನ್ನೊಂದು ಸಾರಿ ಪುನರುಚ್ಚರಿಸುತ್ತೇನೆ, ಕನ್ನಡಕ್ಕೆ ಸಮಾಧಿ, ಹಿಂದಿ ಬರುವಂತಿಲ್ಲ, ಆ ಸ್ಥಾನವನ್ನು ಇಂಗ್ಲೀಷ್ ಆಕ್ರಮಿಸಿಕೊಂಡಿದೆ. ಕನ್ನಡ ಬೆರಳಚ್ಚುಗಾರರು ಬಹಳ ಮಂದಿ ನಿರುದ್ಯೋಗಿಗಳಿದ್ದಾರೆ. ಈ ಬಗ್ಗೆ ಒಂದು ಪ್ರಶ್ನೆಯನ್ನು ಕೂಡ ಕಳುಹಿಸಿದ್ದೇನೆ. ಎಷ್ಟೋ ಕನ್ನಡ ಟೈಪ್‌ರೈಟರ್‌ಗಳು ಮೂಲೆಯಲ್ಲಿ ಬಿದ್ದಿವೆ. ಎಷ್ಟು ಜನಕ್ಕೆ ಕೆಲಸ ಕೊಟ್ಟಿದ್ದೀರಿ? ಮಾನ್ಯ ಬಸವಲಿಂಗಪ್ಪನವರು ಹೇಳಿದರು, ಕನ್ನಡ ಬರುವುದಿಲ್ಲ ಎಂದು. ಒಂದೂವರೆ ಲಕ್ಷ ಮಂದಿ ಅಧಿಕಾರಿಗಳ ಪೈಕಿ ಇವರು ಹೇಳುವ ಸಂಖ್ಯೆ ಎಷ್ಟು ? ತಾವು ಈ ಬಗ್ಗೆ ಅತ್ಯಂತ ಕಳಕಳಿಯಿಂದ ಪ್ರಯತ್ನ ಮಾಡಿದರೆ ಕನ್ನಡವನ್ನು ಎಲ್ಲ ಹಂತದಲ್ಲಿಯೂ ಆಡಳಿತ ಭಾಷೆಯನ್ನಾಗಿ ಮಾಡಬಹುದು. ಇಲ್ಲದಿದ್ದರೆ, ಕರ್ನಾಟಕ ಮಹಾರಾಷ್ಟ್ರವಲ್ಲ. ಕರ್ನಾಟಕ ತಮಿಳ್ನಾಡಲ್ಲ. ಕರ್ನಾಟಕ ಕರ್ನಾಟಕವೇ ಆಗಿರುವುದಿಲ್ಲ. ಆದಕಾರಣ. ಈ ಬಗ್ಗೆ ಎಚ್ಚರಿಕೆ ವಹಿಸಿ ಕಳಕಳಿಯಿಂದ ಕರ್ತವ್ಯ ಮಾಡುವುದಕ್ಕೆ ಏನೇನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಬೇಕು. ಕೇವಲ ಭಾಷಾ ನೀತಿಯನ್ನು ಹೇಳಿದರೆ ಸಾಲದು.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಭಾಷಾ ನೀತಿಯ ವಿಚಾರ ಇದ್ದುದರಿಂದ ಹೇಳಿದೆ. ಆದರೆ ತಮಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ಸರ್ಕಾರಕ್ಕೂ ಕೂಡ ಇದೆಯೆಂದು ಹೇಳುತ್ತೇನೆ.

ಶ್ರೀ ಕೆ. ಪ್ರಭಾಕರ್ ತೇಲ್ಕರ್.—ನಾನು ಬಹಳ ದಿವಸಗಳ ಹಿಂದೆ ವರಲಕ್ಷ್ಮಿ ಬೀಜದ ಬಗ್ಗೆ ಒಂದು ಗಮನಸಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಆದರೆ ಅದು ಈ ಲಾಗಾಯ್ತು ಬರಲಿಲ್ಲ.

ಅಧ್ಯಕ್ಷರು.—ವೈಯಕ್ತಿಕ ಕುಂದು ಕೊರತೆಗಳು ಏನಿದ್ದರೂ ಮಾನ್ಯ ಸದಸ್ಯರು ಅವನ್ನೆಲ್ಲ ಇಲ್ಲಿ ಪ್ರಸ್ತಾಪಿಸದೆ ೩ ಗಂಟೆಯ ಮೇಲೆ ನನ್ನ ಛೇಂಬರಿಗೆ ಬಂದು ನೋಡುವುದು ಒಳ್ಳೆಯದು.

Request to move condoleuce motion on the Demise of the pope,

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಸಭಾಧ್ಯಕ್ಷರ ಮೂಲಕ ಈ ಸಭೆಯ ನಾಯಕರನ್ನು ಮತ್ತು ವಿರೋಧ ಪಕ್ಷದ ನಾಯಕರನ್ನು ಒಂದು ವಿಷಯದಲ್ಲಿ ಪ್ರಾರ್ಥಿಸಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಇಡೀ ಜಗತ್ತಿನ ೭೦ ಕೋಟಿ ಜನರ ಧರ್ಮಗುರುಗಳಾಗಿದ್ದ ಹಾಗೂ ನಮ್ಮ ಕರ್ನಾಟಕದ ೬ ಲಕ್ಷ ಜನರ ಧರ್ಮ ಗುರುಗಳಾಗಿದ್ದ ಪೋಪ್ ಪೋಲರು ೬ರ ರಾತ್ರಿ ೧–೨೦ಕ್ಕೆ ನಿಧನರಾಗಿದ್ದಾರೆ. ಅವರು ಇಡೀ ಜನಕೋಟಿಯಲ್ಲಿ ಶಾಂತಿಯನ್ನು ಸ್ಥಾಪಿಸುವುದಕ್ಕೋಸ್ಕರ ಮತ್ತು ಕಷ್ಟದಲ್ಲಿ ಸಿಕ್ಕಿರತಕ್ಕ ರಾಷ್ಟ್ರ

ಗಳಿಗೆ ಅಪಾರ ಸೇವೆಯನ್ನು ಸಲ್ಲಿಸಿದಂತಹ ಮಹಾವ್ಯಕ್ತಿ. ಇಂಥ ವ್ಯಕ್ತಿ ನಿಧನವಾಗಿರುವಾಗ ಶ್ರದ್ಧಾಂಜಲಿಯನ್ನರ್ಪಿಸತಕ್ಕದ್ದು ಅಗತ್ಯ. ಆದ್ದರಿಂದ, ಎರಡು ನಿಮಿಷಗಳ ಕಾಲ ಮೌನವನ್ನು ಆಚರಿಸುವುದರ ಮೂಲಕ ಅವರ ಆತ್ಮಕ್ಕೆ ಶಾಂತಿಯನ್ನು ಕೋರತಕ್ಕ ನಿರ್ಣಯವನ್ನು ಮಾನ್ಯ ಸಭಾನಾಯಕರು ಮಂಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಅದಕ್ಕೆ ಸಹಕಾರ ನೀಡಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರನ್ನು ಪ್ರಾರ್ಥಿಸಿ ಕೊಳ್ಳುತ್ತೇನೆ. ನಿರ್ಣಯ ಸರ್ಕಾರದ ಪರವಾಗಿ ಬರಲಿ ಎಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸಂತಾಪ ಸೂಚಕ ನಿರ್ಣಯವನ್ನು ಸಭೆಯ ಪ್ರಾರಂಭದಲ್ಲೇ ಮಾಡಬೇಕಾಗಿತ್ತು. ಆದರೆ ಮಾಡಲಿಲ್ಲ. ಆದ್ದರಿಂದ ಈ ಸಂತಾಪಸೂಚಕನಿರ್ಣಯನ್ನು ನಾಳೆ ಮಾಡಬಹುದಲ್ಲ ?

ಅಧ್ಯಕ್ಷರು.—ಈ ಬಗ್ಗೆ ವಾದ ವಿವಾದ ಬೇಡ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಅವರು ನಿಧನ ಹೊಂದಿದ್ದು ಮೊನ್ನೆ ದಿವಸ. ನಿನ್ನೆ ನಾವು ಸಭೆ ಇಲ್ಲಿ ಸೇರಿದ್ದೆವು. ನಿನ್ನೆಯೇ ನಾವು ಸಂತಾಪಸೂಚನೆಯನ್ನು ಮಾಡಿದ್ದರೆ ಚೆನ್ನಾಗಿತ್ತು. ಆದರೆ ನಿನ್ನೆ ಮಾಡಲಿಲ್ಲ. ಪೋಪ್ ಅವರ ಅಂತ್ಯಕ್ರಿಯೆ ಇರುವುದು ೯ನೇ ತಾರೀಖು. ಬಹುಶಃ ನಾವು ಅವತ್ತು ಸಂತಾಪಸೂಚಕನಿರ್ಣಯವನ್ನು ಮಾಡಬಹುದು ಎಂಬುದು ನನ್ನ ಸಲಹೆ.

ಶ್ರೀ ಪಿ ಎಫ್. ರೋಡ್ರಿಗ್ಸ್.—ಅವರ ಅಂತ್ಯಕ್ರಿಯೆ ಇರುವುದು ೯ನೇ ತಾರೀಖಲ್ಲ. ನಾನು ರೇಡಿಯೋದಲ್ಲಿ ಕೇಳಿದ್ದೇನೆ ಅಂತ್ಯಕ್ರಿಯೆ ಇರುವುದು ೧೨ನೇ ತಾರೀಖು ಶನಿವಾರದ ದಿವಸ. ಆ ದಿವಸ ನಾವು ಸಂತಾಪ ಸೂಚನೆ ಮಾಡುವ ಕಾರ್ಯಕ್ರಮ ಇಟ್ಟುಕೊಳ್ಳೋಣ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಗಂಗಾಧರನ್ ಅವರು ನಿರ್ಣಯವನ್ನು ಮಂಡಿಸಿ ದಿವಂಗತ ಪೋಪ್‌ಪಾಲ್ ಅವರು ಧರ್ಮಗುರುಗಳು, ಅವರು ಜಗತ್ತಿನಲ್ಲಿ ಅತ್ಯಂತ ಪ್ರಭಾವಿ ವ್ಯಕ್ತಿಯಾಗಿದ್ದರು, ಬಡವರು, ನಿರ್ಗತಿಕರು, ಮತ್ತು ಬಳಲಿದ ವರ್ಗದವರಿಗೆ ರಾಷ್ಟ್ರದ ಬೇರೆ ಬೇರೆ ಕಡೆಗಳಲ್ಲಿ ತುಂಬಾ ಸಹಾಯವನ್ನು ಮಾಡಿದ್ದಾರೆ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಬೇರೆ ಬೇರೆ ವಿಚಾರದಲ್ಲಿ ಸಹಾಯವನ್ನು ಮಾಡಿದ್ದಾರೆ ಎಂದು ಹೇಳಿದ್ದಾರೆ. ಅವರ ವಿಚಾರದಲ್ಲಿ ಕರ್ನಾಟಕದ ಜನತೆಗೂ ಅಪಾರವಾದ ಗೌರವವಿದೆ ಆದರೆ ಈ ಸಂದರ್ಭದಲ್ಲಿ ಪಾರ್ಲಿಮೆಂಟಿನಲ್ಲಿ ಕೂಡ ಈ ಒಂದು ಶ್ರದ್ಧಾಂಜಲಿಯನ್ನು ಅರ್ಪಿಸಬಹುದಾಗಿತ್ತು. ಬಹುಶಃ ಅವರು ಮರೆತಿದ್ದಾರೋ ಏನೋ ಗೊತ್ತಿಲ್ಲ, ಆದರೂ ಈ ಸಂದರ್ಭದಲ್ಲಿ...

ಶ್ರೀ ಪಿ. ರಾಂದೇವ್.—ರಾಜಕೀಯ ಮಾಡಬೇಡಿ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇದರಲ್ಲಿ ರಾಜಕೀಯದ ವಿಷಯ ಏನೂ ಇಲ್ಲ. ನಮ್ಮ ಮೇಲ್ಮನೆಯಲ್ಲಿ ಕೂಡ ನಿನ್ನೆ ಶ್ರದ್ಧಾಂಜಲಿಯ ನಿರ್ಣಯ ಮಾಡಿದ್ದಾರೆ ಎಂದು ನನ್ನ ತಿಳುವಳಿಕೆಗೆ ಬಂದಿದೆ. ಮಾನ್ಯ ಸದಸ್ಯರು ಹೇಳಿದಂತೆ ಪೋಪ್‌ಪಾಲ್ ಅವರು ಮೊನ್ನೆ ಮರಣಹೊಂದಿದ್ದಾರೆ ಅಂತ್ಯಕ್ರಿಯೆ ೧೨ನೇ ತಾರೀಖು ಶನಿವಾರ ನಡೆಯಲಿದೆ. ಈ ಸಭೆಯ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳೂ ಅಷ್ಟು ಹೊತ್ತಿಗೆ ಬರುತ್ತಾರೆ. ಶನಿವಾರದ ದಿವಸ ಸಭೆ ಸೇರಲಿರುವುದರಿಂದ ಆ ದಿವಸವೇ ಈ ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಬಹುದು ಎಂದು ನಾನು ಸಲಹೆ ಕೊಡುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಸಲಹೆಯನ್ನು ನಾವು ಒಪ್ಪುತ್ತೇವೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಇಂಥ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕಿಂತ ಮುಂಚೆ ನನ್ನ ಗಮನಕ್ಕೆ ತಂದರೆ ಒಳ್ಳೆಯದು. ಇದು ಸರ್ವಾನುಮತದಿಂದ ಎಲ್ಲರೂ ಒಪ್ಪತಕ್ಕ ವಿಚಾರ. ಆದ್ದರಿಂದ ದಯಮಾಡಿ ಇಲ್ಲಿ ಪ್ರಸ್ತಾಪ ಮಾಡುವ ಮೊದಲೇ ನನ್ನ ಗಮನಕ್ಕೆ ತರಬೇಕೆಂದು ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಶನಿವಾರ ಇಟ್ಟುಕೊಳ್ಳುವುದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ.